## ಸುಳ್ಳು ದಾಖಲಾತಿಗಳನ್ನು ಸೃಷ್ಟಿಸಿ ಸರ್ಕಾರಕ್ಕೆ ಮೋಸ ಮಾಡಿದ ಆರೋಪಿತರಿಗೆ 07 ವರ್ಷಗಳ ಕಾರಾವಾಸ ಶಿಕ್ಷೆ

ಸದರಿ ಪ್ರಕರಣದ ಆರೋಪಿತರಾದ ಆರೋಪಿ ನಂ: 01 ಮುಕ್ತಾಬಾಯಿ ಕೋಂ ರಂಗಪ್ಪ ಬೀಸೆ 2) ಕಳಕಪ್ಪ ದೊಡ್ಡರಾಮಪ್ಪ ತಳವಾರ 3) ಮಾರುತಿ ತಂದೆ ಹನುಮಂತಪ್ಪ ಕಿಳ್ಳಿಕ್ಯಾತರ ಇವರು ಕೂಡಿಕೊಂಡು ಸಂಗನಮತ ಮಾಡಿಕೊಂಡು ಆರೋಪಿ ನಂ:01 ನೇದವಳು ಮೂಲತಃ ಹಿಂದೂ ಗೊಂಧಳಿ ( ಪ್ರವರ್ಗ-1) ಜಾತಿಗೆ ಸೇರಿದವಳೆಂದು ತಿಳಿದು ತಿಳಿದು ಪರಿಶಿಷ್ಟ ಜಾತಿಯ ಸಿಳ್ಳಿಕ್ಯಾತರ ಮೀಸಲಾತಿಯಡಿಯಲ್ಲಿ ಗುತ್ತಲ ಗ್ರಾಮ ಪಂಚಾಯಿತಿ ವಾರ್ಡ ನಂ: 10 ರಲ್ಲಿ ಸ್ಪರ್ಧಿಸುವ ಉದ್ದೇಶದಿಂದ ಆರೋಪಿ ನಂ: 03 ನೇದವನ ಸಹಾಯದಿಂದ ಆರೋಪಿ ನಂ: 02 ನೇದವರು ಹೆಡ್ ಮಾಸ್ಟರ್ ಸರ್ಕಾರಿ ಇರಿಯ ಪ್ರಾಥಮಿಕ ಶಾಲೆ ನೂಕಾಪುರ ತಾ॥ ರಾಣೆಬೆನ್ನೂರ ಇವನಿಂದ ಆರೋಪಿ ನಂ:01 ನೇದವಳ ತಂದೆಯಾದ ದುರ್ಗಪ್ಪ ತಂದೆ ದುರ್ಗಪ್ಪ ಕಿಳ್ಳಿಕ್ಯಾತರ ಈತನು ನೂಕಾಪುರ ಶಾಲೆಯಲ್ಲಿ ಕಲಿಯದೇ ಇದ್ದರೂ ಕೂಡಾ ಅವನು ಸರ್ಕಾರಿ ಶಾಲೆಯಲ್ಲಿ ಸನ್-1940 ರಲ್ಲಿ ಶಾಲೆ ಕಲಿತಿರುತ್ತಾನೆ ಅಂತಾ ಶಾಲಾ ದಾಖಲಾತಿ ಸಂಖ್ಯೆ: 104 ಇದರ ಮೇಲೆ ರೌಂಡ ಹಾಕಿ ಅ.ನಂ: 28 ನೇದ್ದಕ್ಕೆ ಕುಶಲಪ್ಪಾ ಫಕೀರಗೌಡ ಗೌಡರ ಇವರ ಜನ್ಮ ದಿನಾಂಕ: 30-02-1954 ಹಾಗೂ ಶಾಲಾ ದಾಖಲಾತಿ ಸಂಖ್ಯೆ: 105 ಇದರ ಮೇಲೆ ರೌಂಡ ಹಾಕಿ ಅ.ನಂ: 29 ನೇದ್ದಕ್ಕೆ ಗಂಗಪ್ಪ ಗುಡ್ಡಪ್ಪ ಬಜ್ಜಿ ಇವರ ಜನ್ಮ ದಿನಾಂಕ: 25-06-1955 ಇದರ ಮಧ್ಯ ಖಾಲಿ ಸ್ಥಳದಲ್ಲಿ ಮತ್ತೆ ಅ.ನಂ:28 ನೇದ್ದಕ್ಕೆ ಆರೋಪಿ ನಂ: 01 ಇವಳ ತಂದೆ ದುರ್ಗಪ್ಪ ಕಿಳ್ಳಿಕ್ಯಾತರ ಇವರ ಜನ್ಮ ದಿನಾಂಕ: 1940 ಅಂತಾ ಉದ್ದೇಶಪೂರ್ವಕವಾಗಿ ಮಧ್ಯ ಸೇರಿಸಿ ಸುಳ್ಳು ದಾಖಲೆ ಸೃಷ್ಟಿಸಿ, ಸದರಿ ದಾಖಲಾತಿಯಿಂದ ಚುನಾವಣೆಯಲ್ಲಿ ಸ್ಪರ್ಧಿಸಲು ಅನುಕೂಲವಾಗಲು ಆರೋಪಿ ನಂ:01 ನೇದವಳು ತಾನು ಹಿಂದೂ ಸಿಳ್ಳಿಕ್ಯಾತ ಪರಿಶಿಷ್ಟ ಜಾತಿಗೆ ಸೇರಿದವಳೆಂದು ಅಪ್ರಮಾಣಿಕತನದಿಂದ ತಹಶೀಲ್ದಾರ ಹಾವೇರಿ ರವರಿಗೆ ಸುಳ್ಳು ದಾಖಲೆಗಳನ್ನು ಹಾಗೂ ಮಾಹಿತಿಯನ್ನು ಪೂರೈಸಿ ಅಪ್ರಮಾಣಿಕವಾಗಿ ಪರಿಶಿಷ್ಟ ಜಾತಿ ಪ್ರಮಾಣ ಪತ್ರವನ್ನು ಪಡೆದುಕೊಂಡು ಸನ್ -2010 ರಲ್ಲಿ ಪರಿಶಿಷ್ಟ ಜಾತಿ ಮಹಿಳೆಗೆ ಮೀಸಲಿಟ್ಟ ಗುತ್ತಲ ಗ್ರಾಮ ಪಂಚಾಯಿತಿ ವಾರ್ಡ ನಂ: 10 ರಲ್ಲಿ ಸದಸ್ಯ ಸ್ಥಾನಕ್ಕೆ ಸ್ಪರ್ಧಿಸಿ ಆಯ್ಕೆಯಾಗಿ ನೈಜ ಪರಿಶಿಷ್ಟ ಜಾತಿಯ ಅಭ್ಯರ್ಥಿಗೆ ಹಾಗೂ ಸರ್ಕಾರಕ್ಕೆ ಮೋಸ ಮಾಡಿದ ಅಪರಾಧಕ್ಕಾಗಿ ಕಲಂ: 196, 197, 198, 420, 465, 468, 471, 477(ಎ) ರೆವಿ 34 ಭಾ.ದಂ.ಸಂ ಮತ್ತು 3(1)(9) ಎಸ್‌ಸಿ/ಎಸ್‌ಟಿ (ಪಿ.ಎ) ಕಾಯ್ದೆ-1989 ರಡಿಯಲ್ಲಿ ಅಪರಾಧ ಎಸಗಿದ ಬಗ್ಗೆ ಆರೋಪಿತರ ಮೇಲೆ ಹಾವೇರಿ ಶಹರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿ ತನಿಖಾಧಿಕಾರಿಗಳಾದ **ಡಾ॥ ಎ.ಬಿ ಹಪ್ಪಳಿ ಪಿ.ಐ, ನಾಗರೀಕ ಹಕ್ಕು ಜಾರಿ ನಿರ್ದೇಶನಾಲಯ, ಬೆಳಗಾವಿ** ರವರು ಪ್ರಕರಣದ ತನಿಖೆಯನ್ನು ನಡೆಸಿ ದೋಷಾರೋಪಣಾ ಪತ್ರವನ್ನು ಮಾನ್ಯ ಜಿಲ್ಲಾ ನ್ಯಾಯಾಲಯಕ್ಕೆ ಸಲ್ಲಿಸಿದ್ದರು.

ಸದರಿ ಪ್ರಕರಣದ ಆರೋಪಿತರಾದ ಆರೋಪಿ ನಂ:01 ಮುಕ್ತಾಬಾಯಿ ಕೋಂ ರಂಗಪ್ಪ ಬೀಸೆ ಸಾ॥ ಗುತ್ತಲ ಮತ್ತು ಆರೋಪಿ ನಂ: 03 ಮಾರುತಿ ತಂದೆ ಹನಮಂತಪ್ಪಾ ಕಿಳ್ಳಿಕ್ಯಾತರ ಸಾ॥ ಭರಡಿ ತಾ॥ ಹಾವೇರಿ ಇವರ ಮೇಲೆ ಹೊರಿಸಲಾದ ಆಪಾದನೆಗಳಾದ **ಕಲಂ: 196, 197, 198, 420, 465, 468, 471, 477(ಎ)** ರೆವಿ **34 ಭಾ.ದಂ.ಸಂ ಮತ್ತು 3(1)(9) ಎಸ್‌ಸಿ/ಎಸ್‌ಟಿ (ಪಿ.ಎ) ಕಾಯ್ದೆ-1989** ರ ಅಡಿಯಲ್ಲಿ ಆಪಾದನೆಗಳನ್ನು ಅಭಿಯೋಜನೆಯು ರುಜುವಾತು ಪಡಿಸಿರುತ್ತದೆ ಅಂತಾ ಹಾವೇರಿಯ 1ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದ **ನ್ಯಾಯಾಧೀಶರಾದ ಶ್ರೀ ಜಿ.ಎಲ್ ಲಕ್ಷ್ಮೀನಾರಾಯಣ ರವರು ಆರೋಪಿತರಿಗೆ 07 ವರ್ಷಗಳ ಕಾರಾಗೃಹ ಶಿಕ್ಷೆ ಮತ್ತು ರೂ. 37,000/- ರೂಗಳ ದಂಡವನ್ನು** ವಿಧಿಸಿ ದಿನಾಂಕ: **11-10-2023** ರಂದು ತೀರ್ಪು ನೀಡಿರುತ್ತಾರೆ.

ಈ ಪ್ರಕರಣದಲ್ಲಿ ಸರ್ಕಾರದ ಪರವಾಗಿ 1ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದ ಸರ್ಕಾರಿ ಅಭಿಯೋಜಕರಾದ **ಶ್ರೀಮತಿ ಸರೋಜಾ ಜಿ ಕೂಡಲಗಿಮಠ** ರವರು ಪ್ರಕರಣ ನಡೆಸಿ ವಾದ ಮಂಡಿಸಿದ್ದರು.

ಹಾವೇರಿ

ದಿನಾಂಕಃ 12-10-2023

ಸಹಿ 12/10/23

( ಸರೋಜಾ ಜಿ ಕೂಡಲಗಿಮಠ )

1ನೇ ಅಧಿಕ ಸರ್ಕಾರಿ ಅಭಿಯೋಜಕರು
ಜಿಲ್ಲಾ ಮತ್ತು ಸತ್ರ ನ್ಯಾಯಾಲಯ
ಹಾವೇರಿ.

ಮ- 9945605506

ವರದಿಗಾರರು,

1) ನಿರ್ದೇಶಕರು, ವಾರ್ತಾ ಮತ್ತು ಪ್ರಚಾರ ಇಲಾಖೆ ಹಾವೇರಿ, ಇವರಿಗೆ ಪ್ರಕಟಣೆಗಾಗಿಸಂಯುಕ್ತ ಕರ್ನಾಟಕ, ಪ್ರಜಾವಾಣಿ, ವಿಜಯ ಕರ್ನಾಟಕ, ವಿಜಯವಾಣಿ, ಕೌರವ, ಮೂಡಣ, ಕನ್ನಡ ಪ್ರಭ ದಿನಪತ್ರಿಕೆ ಹಾವೇರಿ ಇವರಿಗೆ ಪತ್ರಿಕೆಗಳಲ್ಲಿ ಪ್ರಕಟಿಸಲು ವಿನಂತಿಸಲಾಗಿದೆ.